SC:102/2024
PW: 03 CW:03

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 102/2024

| | |
|---|---|
| PW | 03 |
| CW | 03 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 09.10.2025.

| | | |
|---|---|---|
| ಸಾಕ್ಷಿಯ ಹೆಸರು | : | ಅಮಿರ್ ಸಾಬ್ |
| ತಂದೆಯಹೆಸರು | : | ಅಯಾತ್ ಸಾಬ್ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ಮೆಕಾನಿಕ್ ಕೆಲಸ |
| ವಾಸಸ್ಥಳ | : | ಹಂಪಸಂದ್ರ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ'**

ಮೃತ ನಜೀರ್ ಅಹಮದ್ ಇವರು ನನ್ನ ಸ್ನೇಹಿತರಾಗಿದ್ದು ಮೆಹಬೂಬ್ ಸಾಬ್ ಇವರ ಪರಿಚಯ ಇತ್ತು. ಚಾಸಾ.1 ರವರು ಮೃತ ನಜೀರ್ ಅಹಮದ್ ಇವರ ಮಗನಾಗಿದ್ದು, ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರುಪಡಿಸಿದ ಆರೋಪಿಯ ಪರಿಚಯ ಇದ್ದು ಚಾಸಾ.2 ಆರೋಪಿಯ ಹೆಂಡತಿ ಆಗಿರುತ್ತಾರೆ. ನನಗೆ ಚಾಸಾ.4 ರಿಂದ ಚಾಸಾ.26 ರವರ ಪರಿಚಯ ಇರುತ್ತದೆ. ನನ್ನ ಅಂಗಡಿ ಬಸ್ ನಿಲ್ದಾಣದ ಬಳಿ ಇರುತ್ತದೆ. ಆರೋಪಿ ದುಬೈಗೆ ಹೋಗಿ ಬಂದು ಮಾಡುತ್ತಿದ್ದು ಆತನಿಗೆ ಇಬ್ಬರು ಹೆಣ್ಣುಮಕ್ಕಳು ಹಾಗೂ ಒಬ್ಬ ಗಂಡು

ಮಗ ಜನಿಸಿರುತ್ತಾರೆ. ಆರೋಪಿಯ ಹೆಂಡತಿ ಮಕ್ಕಳು ಹಂಪಸಂದ್ರದಲ್ಲಿ ವಾಸವಾಗಿದ್ದು ಆರೋಪಿ ದುಬೈನಿಂದ ಬಂದ ನಂತರ ಆತನ ಹೆಂಡತಿ ಮಕ್ಕಳಿಗೆ ಸರಿ ಹೋಗದಿದ್ದ ಕಾರಣ ಅವರೆಲ್ಲರೂ ಬಾಗೇಪಲ್ಲಿಯಲ್ಲಿ ವಾಸಿಸಲು ಪ್ರಾರಂಭಿಸಿರುತ್ತಾರೆ.

2. ಚಾಸಾ.2 ಹಾಗೂ ಅವರ ಮಕ್ಕಳು ಬಾಗೇಪಲ್ಲಿಯಲ್ಲಿ ವಾಸ ಇದ್ದಾಗ ಅವರ ಜೀವನ ಖರ್ಚನ್ನು ಚಾಸಾ.2 ರವರ ತಂದೆ ನೋಡಿಕೊಳ್ಳುತ್ತಿದ್ದರು. ಆರೋಪಿಗೆ 2 ಎಕರೆ ಜಮೀನು ಇದ್ದು ಜಮೀನಿನ ವಿಚಾರವಾಗಿ ಆಗಾಗ ಗಲಾಟೆ ಮಾಡಿಕೊಂಡು ನಂತರ ಅವರೆಲ್ಲರೂ ಒಂದಾಗುತ್ತಿದ್ದರು. ಆರೋಪಿ ಆತನ ಹೆಂಡತಿ ಮಕ್ಕಳನ್ನು ಮಾತನಾಡಿಸುತ್ತಿದರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ದಿಃ24.07.2024 ರಂದು ಬೆ.5.00 ಗಂಟೆಗೆ ನಾನು ನಮಾಜ್ ಗೆಂದು ಹೋಗುತ್ತಿದ್ದೆನು. ಆ ಸಮಯದಲ್ಲಿ ಆರೋಪಿ ತನ್ನ ಮನೆಯ ಮುಂದೆ ದ್ವಿಚಕ್ರ ವಾಹನವನ್ನು ನಿಲ್ಲಿಸಿಕೊಂಡು ಅಲ್ಲಿ ವಾಕ್ ಮಾಡುತ್ತಿದ್ದರು. ಆರೋಪಿಯ ವಾಹನದಲ್ಲಿ ಒಂದು ಕಪ್ಪು ಬ್ಯಾಗ್ ಸಹಾ ಇತ್ತು. ನಾನು ಮಸೀದಿ ತಲುಪಿ ಒಳಗೆ ಹೋಗಿದ್ದು ನನ್ನ ಸ್ನೇಹಿತನಾದ ನಜೀರ್ ಅಹಮದ್ ಮಸೀದಿಗೆ ಬಾರದಿದ್ದ ಕಾರಣ ನಾನು ಮಸೀದಿಯ ಕಿಟಕಿಯಿಂದ ನೋಡಿದಾಗ ನಜೀರ್ ಅಹಮದ್ ಇವರು ಮಸೀದಿಯ ಕಡೆ ಬರುತ್ತಿದ್ದು ಆತನ ಹಿಂದೆ ಆರೋಪಿ ಬರುತ್ತಿದ್ದರು.

3. ಆ ಸಮಯದಲ್ಲಿ ಜೋರಾದ ಶಬ್ದ ಬಂದಿದ್ದು ನಾನು ನೋಡಿದಾಗ ಆರೋಪಿಯ ಕೈ ನಲ್ಲಿ ಒಂದು ಬಂದೂಕು ಇರುವುದು ಕಂಡು ಬಂದಿರುತ್ತದೆ. ನಜೀರ್ ಅಹಮದ್ ಇವರು ಕೆಳಗೆ ಬಿದ್ದಿದ್ದರೂ ಸಹಾ ಆರೋಪಿ ಒಂದು ಮಚ್ಚಿನಿಂದ ಆತನ ತಲೆಗೆ ಹಾಕಿರುತ್ತಾರೆ. ನಾನು

ನಂತರ ಮಸೀದಿಯಿಂದ ಹೊರಗೆ ಬರುವಷ್ಟರಲ್ಲಿ ಮೆಹಬೂಬ್ ಸಾಬ್ ಇವರು ಜೋರಾಗಿ ಕಿರುಚಾಡಿದ್ದು ಆಗ ಆರೋಪಿ ಒಂದು ಮಚ್ಚಿನಿಂದ ಮೆಹಬೂಬ್ ಸಾಬ್ ಇವರ ತಲೆಗೆ ಹೊಡೆದು ಸ್ಥಳದಿಂದ ಹೊರಟು ಹೋಗಿದ್ದರು. ನಂತರ ಸ್ಥಳಕ್ಕೆ ಚಾಸಾ.1 ರವರು ಆತನ ಅಜ್ಜ ಕಿರುಚಿಕೊಂಡ ಶಬ್ದವನ್ನು ಕೇಳಿ ಬಂದಿದ್ದು ಮೆಹಬೂಬ್ ಸಾಬ್ ಇವರಿಗೆ ಇನ್ನು ಪ್ರಾಣ ಇದ್ದ ಕಾರಣ ಆತನನ್ನು ಒಂದು ಕಾರಿನಲ್ಲಿ ಗುಂಡಿಬಂಡೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಗುಡಿಬಂಡೆ ಆಸ್ಪತ್ರೆಯಲ್ಲಿ ಆಗುವುದಿಲ್ಲ ಎಂದ ಕಾರಣ ಮೆಹಬೂಬ್ ಸಾಬ್ ಇವರನ್ನು ಚಿಕ್ಕಬಳ್ಳಾಪುರ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ನಂತರ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದ ವಿಚಾರ ತಿಳಿದುಬಂತು. ಅದೇ ದಿನ ಬೆ.10.00 ಅಥವಾ 11.00 ಗಂಟೆಗೆ ಮೆಹಬೂಬ್ ಸಾಬ್ ಇವರು ಮೃತ ಪಟ್ಟ ವಿಚಾರ ತಿಳಿದುಬಂತು.

4. ನಜೀರ್ ಅಹಮದ್ ಇವರು ಸ್ಥಳದಲ್ಲಿಯೇ ಮೃತಪಟ್ಟಿದ್ದು ಆತನ ಶವವನ್ನು ಗುಡಿಬಂಡೆ ಆಸ್ಪತ್ರೆಗೆ ಸಾಗಿಸಿರುತ್ತಾರೆ. ನಂತರ ಆರೋಪಿ ಬಿಹಾರ್ ನಿಂದ ಪಿಸ್ತೂಲ್ ತರಿಸಿದ ವಿಚಾರ ನನಗೆ ತಿಳಿದುಬಂತು. ಆರೋಪಿ ಇನ್ನು ಏನೇನೋ ವಸ್ತುಗಳನ್ನು ಇಟ್ಟುಕೊಂಡಿದ್ದು ಅದು ಏನು ಎಂದು ನನಗೆ ತಿಳಿದಿಲ್ಲ. ನಮ್ಮ ಊರಿನ ಹಿರಿಯರು ಪೊಲೀಸರಿಗೆ ಕೃತ್ಯದ ವಿಚಾರವನ್ನು ಫೋನಿನ ಮೂಲಕ ತಿಳಿಸಿರುತ್ತಾರೆ. ಜಮೀನಿನ ವಿಚಾರವಾಗಿ ಆಗಾಗ ಗಲಾಟೆ ಆಗುತ್ತಿದ್ದು ಅದೇ ವಿಚಾರವಾಗಿ ಆರೋಪಿ ಕೃತ್ಯ ಮಾಡಿರುತ್ತಾರೆ. ನಾನು ಆ ದಿನ ಮಚ್ಚು , ಪಿಸ್ತೂಲ್ ನೋಡಿದ್ದು ಅವುಗಳನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಮಚ್ಚನ್ನು ಈಗಾಗಲೇ ಮುಮಾ.3 ಎಂದು ಗುರುತಿಸಿರುತ್ತದೆ. ನಾನು ಇಬ್ಬರ ಮೃತ ದೇಹಗಳನ್ನು ನೋಡಿದ್ದು ಸಾಕ್ಷಿದಾರರು ನಿಪಿ.4 ರಿಂದ 10 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು

ಈ ಎಲ್ಲಾ ವಿಚಾರಗಳನ್ನು ಗುಡಿಬಂಡೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಮುಂದೆ ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ವಿ , ಮಾನ್ಯ ಡೆಪ್ಯುಟಿ ಡಿಫೆನ್ಸ್ ಕೌನ್ಸಲ್ ಇವರಿಂದ**

5. ನಾನು ದ್ವಿಚಕ್ರ ವಾಹನದ ಮೆಕಾನಿಕ್ ಕೆಲಸ ಮಾಡುತ್ತೇನೆ. ನಮ್ಮ ಗ್ರಾಮದಲ್ಲಿ ಜಾಮೀಯ ಮಸೀದಿ ಇರುತ್ತದೆ. ನಾನು ಪ್ರತಿದಿನ ಬೆ.5.00 ಗಂಟೆಗೆ ನಮಾಜ್ ಮಾಡಲು ಹೋಗುತ್ತೇನೆ. ಮಸೀದಿಯ ಮುಖ್ಯಸ್ಥ ನಾನೇ ಆಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬೇರೆಯವರು ಮುಖ್ಯಸ್ಥರಾಗಿರುವುದಾಗಿ ಉತ್ತರಿಸಿರುತ್ತಾರೆ. ನನ್ನ ಮೆಕಾನಿಕ್ ಶಾಪ್ ಬಸ್ ನಿಲ್ದಾಣದ ಬಳಿ ಇರುತ್ತದೆ. ಮಸೀದಿಯಿಂದ ನನ್ನ ಅಂಗಡಿ 200 ಅಡಿ ದೂರದಲ್ಲಿ ಇರುತ್ತದೆ. ಮಸೀದಿಯ ಮುಖ್ಯ ಬಾಗಿಲು ಪೂರ್ವದ ಕಡೆ ಇರುತ್ತದೆ. ಕಿಟಕಿಗಳು ಮಸೀದಿಯ ಉತ್ತರ-ದಕ್ಷಿಣದ ಗೋಡೆಯಲ್ಲಿ ಇರುತ್ತದೆ. ಮಸೀದಿಯ ಮುಖ್ಯ ಬಾಗಿಲು ಪೂರ್ವದ ಕಡೆ ಇರುವ ಕಾರಣ ಮಸೀದಿಯ ಹಿಂಭಾಗದಲ್ಲಿರುವ ರಸ್ತೆ ಕಾಣಿಸುವುದಿಲ್ಲ ಎಂದರೆ ಸರಿ. ಮಸೀದಿಯ ಒಳಗೆ ಇದ್ದಲ್ಲಿ ಆ ರಸ್ತೆಯಲ್ಲಿ ಯಾರು ಓಡಾಡುತ್ತಾರೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ .

6. ಬೆ.5.00 ಗಂಟೆ ಸಮಯದಲ್ಲಿ ಕತ್ತಲು ಆವರಿಸಿರುತ್ತದೆ ಎಂದರೆ ಸರಿ . ಬೆ.5.00 ಗಂಟೆ ಸಮಯದಲ್ಲಿ ಚಳಿ ಇರುವ ಕಾರಣ ಮಸೀದಿಯ ಕಿಟಕಿಗಳನ್ನು ಬಂದ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮಸೀದಿಯ ಒಳಗೆ ಇದ್ದಾಗ ಎಲ್ಲಾ ಕಿಟಕಿಗಳನ್ನು ತೆಗೆದಿತ್ತು.

ಮಸೀದಿಯ ಕಿಟಕಿಗಳು ಓಪನ್ ಇದ್ದ ವಿಚಾರವನ್ನು ಪೊಲೀಸರು ಕೇಳದಿದ್ದ ಕಾರಣ ನಾನು ಅದರಂತೆ ಹೇಳಿಕೆ ನೀಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ನಾನು ಮಸೀದಿಯ ಒಳಗೆ ಇದ್ದಾಗ ಮಸೀದಿಯ ಕಿಟಕಿಗಳು ತೆಗೆದಿತ್ತು ಎಂದು ಹೇಳಿರುತ್ತೇನೆ. ಮಸೀದಿಯ ಕಿಟಕಿಗಳು ಅಂದಾಜು 10 ಅಡಿ ಅಗಲ ಇದ್ದು 3 ಶಟರ್ಸ್ ಗಳು ಇರುತ್ತದೆ.

7. ನಾವು ಮಸೀದಿಯಲ್ಲಿ ಪ್ರಾರ್ಥನೆ ಮಾಡುವಾಗ ಹೊರಗಿನ ಪ್ರಪಂಚದ ಆಗುಹೋಗುಗಳನ್ನು ಆಲಿಸುವುದಿಲ್ಲ ಎಂದರೆ ಸರಿ. ನಮ್ಮ ಮಸೀದಿಯಲ್ಲಿ ಮೈಕ್‌ಸೆಟ್ ಅಳವಡಿಸಿರುತ್ತದೆ. ನಾವು ಮಸೀದಿಯ ಒಳಗೆ ಪ್ರಾರ್ಥನೆ ಮಾಡುವಾಗ ಮೈಕ್‌ಸೆಟ್ ನಿಂದ ಜೋರಾಗಿ ಶಬ್ದ ಬರುತ್ತದೆ ಎಂದರೆ ಸಾಕ್ಷಿಯ ನಾವು ಒಳಗೆ ಪ್ರಾರ್ಥನೆ ಮಾಡುವಾಗ ಮೈಕ್ ಸೆಟ್ ಆನ್ ಮಾಡುವುದಿಲ್ಲ ಆದರೆ ಆಜಾದ್ ಕೂಗುವಾಗ ಮಾತ್ರ ಮೈಕ್‌ಸೆಟ್ ಆನ್ ಆಗುವುದಾಗಿ ಉತ್ತರಿಸಿರುತ್ತಾರೆ. ಆಜಾದ್ ನ್ನು ಕೂಗುವಾಗ ಬೆ.5.15 ಸಮಯ ಆಗಿರುತ್ತದೆ ಎಂದರೆ ಸಾಕ್ಷಿಯು ಬೆ.5.00 ಗಂಟೆಗೆ ಕೂಗುವುದಾಗಿ ಉತ್ತರಿಸಿರುತ್ತಾರೆ. ಆಜಾದ್ ಕೂಗುವ ಸಮಯದಲ್ಲಿ ಮಸೀದಿಯಲ್ಲಿ 3 ಅಥವಾ 4 ಜನರು ಸೇರಿದ್ದರು. ಮಸೀದಿ ಆಜಾದ್ ಕೂಗುವ ಸಮಯದಲ್ಲಿ ನಾನು ಮಸೀದಿಯ ಒಳಗೆ ಇದ್ದೆನು ಎಂದು ಪೊಲೀಸರು ಮುಂದೆ ಹೇಳಿಕೆ ನೀಡಿರುತ್ತೇನೆ.

8. ಆ ದಿನ ಬೆಳಗ್ಗೆ ಆರೋಪಿ ಒಬ್ಬರೇ ವಾಕ್ ಮಾಡುತ್ತಿದ್ದರು. ಬೆ.5.00 ಗಂಟೆ ಸಮಯದಲ್ಲಿ ವಾಕ್ ಮಾಡುವವರು ಯಾರು ದ್ವಿಚಕ್ರ ವಾಹನವನ್ನು ಹೊರಗೆ

ತೆಗೆಯುವುದಿಲ್ಲ ಎಂದರೆ ಆರೋಪಿ ದ್ವಿಚಕ್ರ ವಾಹನ ನಿಲ್ಲಿಸಿ ಅಲ್ಲಿ ವಾಕ್ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಆರೋಪಿ ದ್ವಿಚಕ್ರ ವಾಹನ ನಿಲ್ಲಿಸಿ ವಾಕ್ ಮಾಡುತ್ತಿದ್ದರು ಎಂದು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ನಮ್ಮ ಮನೆಯಿಂದ ಮೆಹಬೂಬ್ ಸಾಬ್ ಇವರ ಮನೆ 100 ಅಡಿ ದೂರದಲ್ಲಿದ್ದು ನಜೀರ್ ಅಹಮದ್ ಇವರ ಮನೆ 40 ಅಡಿ ದೂರದಲ್ಲಿ ಇರುತ್ತದೆ. ನನಗೆ ಚಾಸಾ.1 ರವರು ಬಹಳ ಪರಿಚಯ ಎಂದರೆ ಸರಿ . ನಾವು ಮಸೀದಿಯ ಒಳಗೆ ಪ್ರಾರ್ಥನೆ ಮಾಡುವಾಗ ಹೊರಗಿನಿಂದ ಯಾವುದೇ ಗಲಾಟೆ ಶಬ್ದ ಕೇಳಿಸುವುದಿಲ್ಲ ಎಂದರೆ ಸಾಕ್ಷಿಯು ನಾವು ಆ ಸಮಯದಲ್ಲಿ ಪಾರ್ಥನೆ ಪ್ರಾರಂಭಿಸಿರಲಿಲ್ಲ ಪ್ರಾರ್ಥನೆಯನ್ನು ಬೆ.5.30 ಕ್ಕೆ ಪ್ರಾರಂಭಿಸುವುದಾಗಿ ಉತ್ತರಿಸಿರುತ್ತಾರೆ. ನನಗೆ ಶಬ್ದ ಕೇಳಿಸಿದ ನಂತರ ಹೊರಗೆ ಹೋಗಲು ಪ್ರಯತ್ನಿಸಿಲ್ಲ ಕಾರಣ ನನಗೂ ಭಯ ಇತ್ತು.

9. ಆರೋಪಿ ಮಚ್ಚನ್ನು ತನ್ನ ಬಲಗೈನಲ್ಲಿ ಹಿಡಿದಿದ್ದರು. ಆರೋಪಿ ನಂತರ ಮಚ್ಚನ್ನು ಮೆಹಬೂಬ್ ಸಾಬ್ ಇವರ ಮನೆಯ ಬಳಿ ತೆಗೆದುಕೊಂಡು ಹೋಗಿದ್ದರು. ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಆರೋಪಿ ಮಚ್ಚನ್ನು ಅಲ್ಲೆ ಬಿಸಾಡಿ ಹೋದರು ಎಂದು ತಿಳಿಸಿರುತ್ತೇನೆ. ನಾನು ಮಸೀದಿಯ ಒಳಗೆಇದ್ದ ಕಾರಣ ಹೊರಗೆ ಏನು ಆಗಿರುತ್ತದೆ , ಮಚ್ಚನ್ನು ಆರೋಪಿ ಎಲ್ಲಿ ಬಿಸಾಡಿ ಹೋದರು ಎಂದು ಕಾಣಿಸುವುದಿಲ್ಲ ಎಂದರೆ ಸಾಕ್ಷಿಯು ನಾನು ಕಿಟಕಿಯಿಂದ ನೋಡುತ್ತಿದ್ದೆನು ಎಂದು ಉತ್ತರಿಸಿರುತ್ತಾರೆ. ಆ ಸಮಯದಲ್ಲಿ ಕತ್ತಲೆ ಇದ್ದ ಕಾರಣ ಘಟನೆ ಹೇಗೆ ನಡೆದಿರುತ್ತದೆ ಎಂದು ನನಗೆ ನೋಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ಅಲ್ಲಿ 2 ಬೀದಿ ದೀಪಗಳು ಇದ್ದು ಗೋಪುರದ ದೀಪ ಇತ್ತು ಎಂದು ಉತ್ತರಿಸಿರುತ್ತಾರೆ.

10. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಆರೋಪಿ ವಾಕ್ ಮಾಡಿತಿದ್ದ ವಿಚಾರ , ಹಲ್ಲೆ ಮಾಡಿದ ವಿಚಾರ ತಿಳಿದುಬಂತು ಎಂದು ಹೇಳಿರುತ್ತೇನೆ. ಈ ರೀತಿ ಘಟನೆ ಆಗಿರುತ್ತದೆ ಎಂದು ಪೊಲೀಸರು ಹೇಳಿದಾಗ ನನಗೆ ಘಟನೆ ಬಗ್ಗೆ ತಿಳಿದುಬಂತು ಎಂದರೆ ಸಾಕ್ಷಿಯ ನಾನೇ ಪೊಲೀಸರಿಗೆ ಘಟನೆಯ ವಿಚಾರ ತಿಳಿಸಿರುವುದಾಗಿ ಉತ್ತರಿಸಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡುವಾಗ ಘಟನೆಯ ವಿಚಾರ ಬೇರೆಯವರಿಂದ ತಿಳಿದುಬಂತು ಎಂದು ಹೇಳಿರುವುದಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿಲ್ಲ , ಆ ದಿನ ಪ್ರಾರ್ಥನೆಗಾಗಿ ಮಸೀದಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಚಾಸಾ.1 , ನಜೀರ್ ಸಾಬ್ ಹಾಗೂ ಮೆಹಬೂಬ್ ಸಾಬ್ ಪರಿಚಯ ಇದ್ದು ನಾನು ಯಾವುದೇ ಘಟನೆ ನೋಡದೇ ಇದ್ದರೂ ಸಹಾ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

11. ದಿಃ24.07.2024 ರಂದು ಲೋಕಸಭೆ ಚುನಾವಣೆಯ ಮತ ಎಣಿಕೆ ಕಾರ್ಯ ಇತ್ತು ಎಂದರೆ ಸರಿಯಲ್ಲ. ಚುನಾವಣೆ ಮತ ಎಣಿಕೆ ಆದ ನಂತರ ಯಾರೋೀ ಪಟಾಕಿಗಳನ್ನು ಹೊಡೆಯುತ್ತಿದ್ದಾರೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ನಜೀರ್ ಅಹಮದ್ ಮತ್ತು ಮೆಹಬೂಬ್ ಸಾಬ್ ನಡುವೆ ಆಸ್ತಿ ವಿಚಾರವಾಗಿ ವಿವಾದ ಇರುವ ವಿಚಾರ ತಿಳಿದಿರುತ್ತದೆ ಎಂದರೆ ಸಾಕ್ಷಿಯು ಅವರಿಬ್ಬರ ನಡುವೆ ಆ ರೀತಿ ಯಾವುದೇ ವಿವಾದ ಇರಲಿಲ್ಲ ಎಂದು ನುಡಿದಿರುತ್ತಾರೆ. ಆರೋಪಿ ಜಮೀನಿನ ವಿಚಾರವಾಗಿ ಮೆಹಬೂಬ್ ಸಾಬ್ ಇವರ ಬಳಿ ಕೇಳಿಲ್ಲ ಎಂದರೆ ಸಾಕ್ಷಿಯು ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಆಸ್ತಿಯ ವಿಚಾರವಾಗಿ ಮೆಹಬೂಬ್ ಸಾಬ್ ಹಾಗೂ ಆರೋಪಿಯ ನಡುವೆ ಗಾಲಟೆಯಾಗುತ್ತಿತ್ತು

ಎಂದು ಪೊಲೀಸರ ಮುಂದೆ ಹೇಳಿಲ್ಲ. ನನಗೆ ಘಟನೆಯ ವಿಚಾರ ಯಾವುದೇ ತಿಳಿದಿಲ್ಲ, ಆರೋಪಿ ಮೃತರ ಜೊತೆ ಯಾವುದೇ ಗಲಾಟೆ ಮಾಡಿಕೊಂಡಿಲ್ಲ, ಆರೋಪಿ ಮೃತರನ್ನು ಕೊಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮೆಹಬೂಬ್ ಸಾಬ್ ಹಾಗೂ ನಜೀರ್ ಅಹಮದ್ ಪರಸ್ಪರ ಗಲಾಟೆ ಮಾಡಿಕೊಂಡಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಘಟನೆಯನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ . ನಾನು ನಿಪಿ 4 ರಿಂದ 10 ರ ಫೋಟೋಗಳನ್ನು ಇದೇ ದಿನ ಮೊದಲ ಬಾರಿಗೆ ನೋಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 09.10.2025 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

sd/-
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.